ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಮಂಡಲ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ    ದಿನಾಂಕ : DATE 16/2/20

# ನಾಳೆ ಸದನದಲ್ಲಿ ಕಾದಾಟ

## ಆನಂದ್ ಸಿಂಗ್‌ಗೆ ಅರಣ್ಯ ಖಾತೆ ಹಂಚಿಕೆ ಮಾಡಿದ್ದಕ್ಕೆ ಅಧಿವೇಶನದಲ್ಲಿ ಕೋಲಾಹಲ ಸೃಷ್ಟಿಸಲು ಪ್ರತಿಪಕ್ಷ ಸಜ್ಜು

16/2/2020

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಸೋಮವಾರದಿಂದ ಆರಂಭವಾಗಲಿರುವ ವಿಧಾನಮಂಡಲದ ಜಂಟಿ ಅಧಿವೇಶನದ ವೇಳೆ ಸರಕಾರದ ವಿರುದ್ಧ ಮುಗಿಬೀಳಲು ಸಜ್ಜಾಗುತ್ತಿರುವ ಪ್ರತಿಪಕ್ಷಗಳಿಗೆ, ಆನಂದ್ ಸಿಂಗ್ ಅವರಿಗೆ ಅರಣ್ಯ ಖಾತೆ ನೀಡಿರುವ ವಿಚಾರವೇ ಮೊದಲಾಸ್ತ್ರವಾಗಿದೆ.

ಅಕ್ರಮ ಗಣಿಗಾರಿಕೆ, ಅರಣ್ಯ ಒತ್ತುವರಿ ಸೇರಿದಂತೆ ಹಲವು ಗುರುತರ ಆರೋಪ ಹೊಂದಿದ್ದರೂ ಆನಂದ್ ಸಿಂಗ್‌ಗೆ ಅರಣ್ಯ ಖಾತೆಯನ್ನೇ ನೀಡಿರುವುದಕ್ಕೆ ಕಾಂಗ್ರೆಸ್ ನಾಯಕರು ಈಗಾಗಲೇ ಖಂಡಿಸುತ್ತಿದ್ದಾರೆ. ಆದ್ದರಿಂದ ಇದೇ ಹುರುಪಲ್ಲಿ ಸದನದಲ್ಲಿಯೂ ಆನಂದ್ ಸಿಂಗ್ ವಿರುದ್ಧ ವಾಗ್ದಾಳಿ ನಡೆಸಿ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಲೆಕ್ಕಾಚಾರದಲ್ಲಿ ಕಾಂಗ್ರೆಸ್-ಜೆಡಿಎಸ್ ನಾಯಕರಿದ್ದರೆ, ಇದನ್ನು ನಿಭಾಯಿಸುವುದು ಹೇಗೆ ಎನ್ನುವ ಚಿಂತೆಯಲ್ಲಿ ಬಿಜೆಪಿ ನಾಯಕರಿದ್ದಾರೆ.

ಆನಂದ್ ಸಿಂಗ್ ಅವರಿಗೆ ಅರಣ್ಯ ಖಾತೆ ನೀಡಿರುವ ಯಡಿಯೂರಪ್ಪ ಅವರ ನಡೆಗೆ ಕಾಂಗ್ರೆಸ್ ಮೊದಲೇ ವಿರೋಧಿಸಿತ್ತು. ಸಾಮಾಜಿಕ ಜಾಲತಾಣದಲ್ಲಿ ಹಾಗೂ ಸಾರ್ವಜನಿಕ ವಲಯದಲ್ಲಿಯೂ ದೊಡ್ಡಮಟ್ಟದ ಟೀಕೆ ವ್ಯಕ್ತವಾಗಿತ್ತು. ಸಾಮಾಜಿಕ ಜಾಲತಾಣದಲ್ಲಿ ಬಿಜೆಪಿ ಪರ ಆಕ್ಟೀವ್ ಆಗಿರುವವರು ಕೂಡ ಯಡಿಯೂರಪ್ಪ ಅವರ ಈ ನಡೆಯನ್ನು ಖಂಡಿಸಿದ್ದಾರೆ.

**ಇಂದು ಹೋರಾಟದ ರೂಪುರೇಷೆ ಸಜ್ಜು:** ಸದನದಲ್ಲಿ ಬಿಜೆಪಿ ವಿರುದ್ಧ ಮುಗಿಬೀಳಲು ಯಾವ ರೀತಿ ರೂಪುರೇಷೆ ಸಜ್ಜುಗೊಳಿಸಬೇಕು ಎನ್ನುವ ವಿಚಾರಕ್ಕೆ ಸಂಬಂಧಿಸಿದಂತೆ ಭಾನುವಾರ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಕರೆಯಲಾಗಿದ್ದು, ಈ ವೇಳೆ ಆನಂದ್ ಸಿಂಗ್ ವಿರುದ್ಧ ಎಲ್ಲರೂ ಮುಗಿಬೀಳದೇ, ಪ್ರಮುಖ ನಾಯಕರು ಮಾತ್ರ ವಾದ ಮಂಡಿಸಬೇಕು. ಗಲಾಟೆ ಮಾಡುವುದರಿಂದ ಸದನವನ್ನು ಮುಂದೂಡುವ ಸಾಧ್ಯತೆಯಿದೆ. ಆದ್ದರಿಂದ ಈ ನಿರ್ಧಾರಕ್ಕೆ ಕೈ ನಾಯಕರು ಬಂದಿದ್ದಾರೆ ಎನ್ನಲಾಗಿದೆ.



### ಬಿಜೆಪಿಗೆ ನುಂಗಲಾರದ ತುತ್ತು

ಆನಂದ್ ಸಿಂಗ್ ಅವರ ನೇಮಕ ಇದೀಗ ಬಿಜೆಪಿಗೆ ನುಂಗಲಾರದ ತುತ್ತಾಗಿದೆ. ಈ ಹಂತದಲ್ಲಿ ಸಿಂಗ್ ಅವರ ಖಾತೆ ಬದಲಾವಣೆಯಾದರೆ, ಪ್ರತಿಪಕ್ಷಗಳ ಮುಂದೆ ಯುದ್ಧಕ್ಕೆ ಮೊದಲೇ ಶಸ್ತ್ರತ್ಯಾಗ ಮಾಡಿದಂಗಾಗುತ್ತದೆ. ಇಲ್ಲದೇ ಅವರನ್ನೇ ಅರಣ್ಯ ಖಾತೆಯಲ್ಲಿ ಮುಂದುವರಿಸಿದರೆ ಅಧಿವೇಶನದಲ್ಲಿ ಪ್ರತಿಪಕ್ಷಗಳ ಟೀಕಾಪ್ರಹಾರಕ್ಕೆ ಉತ್ತರ ನೀಡಬೇಕಾಗುತ್ತದೆ. ಆದ್ದರಿಂದ ಇದೀಗ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಸಂಪುಟ ಸದಸ್ಯರಿಗೆ ಆನಂದ್ ಸಿಂಗ್ ಅವರನ್ನು ಸಮರ್ಥಿಸಿಕೊಳ್ಳುವುದೇ ದೊಡ್ಡ ಸವಾಲಾಗಿದೆ.

### ಪ್ರತಿಪಕ್ಷಗಳ ಇತರ ಅಸ್ತ್ರಗಳೇನು ?

- ಸಿಎಎ, ಎನ್‌ಆರ್‌ಸಿ ಜಾರಿಗೆ ವಿರೋಧ
- ನೆರೆ ಪರಿಹಾರ ವಿತರಣೆಯಲ್ಲಾಗಿರುವ ತಾರತಮ್ಯ
- ಪ್ರವಾಹದಲ್ಲಿ ಮನೆ ಕಳೆದುಕೊಂಡರಿಗೆ ಇನ್ನೂ ತಲುಪದ ಪರಿಹಾರ
- ಬೀದರ್‌ನಲ್ಲಿ ಮಹಿಳೆಯೊಬ್ಬರ ಮೇಲೆ ಹಾಕಿರುವ ದೇಶದ್ರೋಹದ ಪ್ರಕರಣ
- ಹಿಂದಿನ ಸರಕಾರದಲ್ಲಿ ಬಿಡುಗಡೆಯಾದ ಅನುದಾನ ತಡೆಹಿಡಿದಿರುವುದು
- ಖಾತೆ ಹಂಚಿಕೆಯಲ್ಲಾದ ಗೊಂದಲ ಹಾಗೂ ನೆನೆಗುಂದಿಗೆ ಬಿದ್ದಿರುವ ಯೋಜನೆ

ಆನಂದ್‌ಸಿಂಗ್ ಅವರನ್ನು ಸಚಿವ ಸ್ಥಾನದಿಂದ ಕೈ ಬಿಡದಿದ್ದರೆ ಅಧಿವೇಶನದಲ್ಲಿ ಧರಣಿ ನಡೆಸುತ್ತೇವೆ. ಸಿಂಗ್‌ಗೆ ಸಚಿವ ಸ್ಥಾನ ನೀಡಿದ್ದೇ ದೊಡ್ಡ ತಪ್ಪು. ಸಿಎಂ ಯಡಿಯೂರಪ್ಪ ಅವರು ಮೊದಲೇ ಯೋಚಿಸಬೇಕಿತ್ತು. ಕೂಡಲೇ ಅವರನ್ನು ಸಚಿವ ಸ್ಥಾನದಿಂದ ತೆಗೆಯಬೇಕು. ಇಲ್ಲವೆ ಖಾತೆ ಬದಲಾವಣೆ ಮಾಡಬೇಕು. ಇಲ್ಲದಿದ್ದರೆ ಸದನದ ಒಳಗೆ ಹಾಗೂ ಹೊರಗೆ ಉಗ್ರ ಹೋರಾಟ ಮಾಡುತ್ತೇವೆ.

- ಎಚ್.ಕೆ ಪಾಟೀಲ್
ಶಾಸಕ



2